" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕರ್ನಾಟಕ ವಿಧಾನ ಪರಿಷತ್ತು**

5ನೇ ಮಾರ್ಚ್ 2020
ಗುರುವಾರ

**ವಿಷಯಾನುಕ್ರಮಣಿಕೆ**

1. **ಕೆಳಮನೆಯಲ್ಲಿ ಬಜೆಟ್ ಭಾಷಣ ಪ್ರಾರಂಭವಾಗುತ್ತಿದ್ದಂತೆಯೇ ಮೇಲ್ಮನೆಯಲ್ಲಿಯೂ ಮಾನ್ಯ ಸದಸ್ಯರಿಗೆ ಬಜೆಟ್ ಭಾಷಣದ ಪ್ರತಿಗಳನ್ನು ನೀಡುವ ಬಗ್ಗೆ**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಪುಟ್ಟಣ್ಣ
- ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯ ಮಂತ್ರಿಗಳು ಹಾಗೂ ಹಣಕಾಸು ಸಚಿವರು)

2. **ವಿತ್ತೀಯ ಕಾರ್ಯಕಲಾಪ**

**2020-2021ನೇ ಸಾಲಿನ ಆಯವ್ಯಯ ಅಂದಾಜುಗಳ ಮಂಡನೆ**

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)

~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~

**(170) 05–03–2020 ಬಿಎಸ್‌ಡಿ:ಬಿಎನ್‌ಎಸ್ 1–00**

**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ, 5ನೇ ಮಾರ್ಚ್ 2020**

***ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಮಧ್ಯಾಹ್ನ 1 ಗಂಟೆ 04 ನಿಮಿಷಕ್ಕೆ ಸಮಾವೇಶಗೊಂಡಿತು.***

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಾದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**1. ಕೆಳಮನೆಯಲ್ಲಿ ಬಜೆಟ್ ಭಾಷಣ ಪ್ರಾರಂಭವಾಗುತ್ತಿದ್ದಂತೆಯೇ ಮೇಲ್ಮನೆಯಲ್ಲಿಯೂ ಮಾನ್ಯ ಸದಸ್ಯರಿಗೆ ಬಜೆಟ್ ಭಾಷಣದ ಪ್ರತಿಗಳನ್ನು ನೀಡುವ ಬಗ್ಗೆ.**

– – – – –

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರತಿ ಬಾರಿ ಕೆಳಮನೆಯಲ್ಲಿ ಬಜೆಟ್ ಭಾಷಣ ಪ್ರಾರಂಭವಾಗುತ್ತಿದ್ದಂತೆಯೇ ಮೇಲ್ಮನೆಯಲ್ಲಿಯೂ ಮಾನ್ಯ ಸಭಾನಾಯಕರು ಬಜೆಟ್ ಮಂಡನೆ ಮಾಡಿ ಮಾನ್ಯ ಸದಸ್ಯರಿಗೆ ಬಜೆಟ್ ಪ್ರತಿಗಳನ್ನು ನೀಡುತ್ತಿದ್ದರು. ಆದರೆ ಈಗ ಏಕೆ ಈ ಪದ್ಧತಿ? ವಿಧಾನ ಸಭೆಯಲ್ಲಿ ಬೆಳಗ್ಗೆ 11 ಗಂಟೆಗೆ ಬಜೆಟ್ ಭಾಷಣ ಪ್ರಾರಂಭಿಸಿ ಮಾನ್ಯ ಸದಸ್ಯರಿಗೆ ಬಜೆಟ್ ಭಾಷಣದ ಪ್ರತಿಗಳನ್ನು ನೀಡಿದರೆ, ವಿಧಾನ ಪರಿಷತ್ತಿನಲ್ಲಿಯೂ ಅದೇರೀತಿ ಸರಿಸುಮಾರು ಬೆಳಗ್ಗೆ 11 ಗಂಟೆಗೆ ಬಜೆಟ್ ಪ್ರತಿಗಳನ್ನು ಕೊಡಬೇಕು. ಅವರು ಹೊಸ ಪದ್ಧತಿಯನ್ನು ಏಕೆ ತಂದರು?

**ಸಭಾಪತಿಯವರು:–** ಕಳೆದ ಬಾರಿ ಯಾವಾಗ ಹಂಚಿಕೆ ಮಾಡಲಾಯಿತು?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಕಳೆದ ಬಾರಿಯೂ ನಿಧಾನವಾಗಿ ಹಂಚಿಕೆ ಮಾಡಿದಾಗ ನಾವು ಹೇಳಿದ್ದೇವೆ. ಈ discrimination ಏಕೆ ಮಾಡುತ್ತಾರೆ? ಕಳೆದ ಬಾರಿ ಮಾಡಿದ ತಪ್ಪು ಈ ಬಾರಿಯೂ ಮಾಡಬೇಕೇ? ಮೇಲ್ಮನೆ ಮತ್ತು ಕೆಳಮನೆಗಳಲ್ಲಿ ತಾರತಮ್ಯ ಏಕೆ?

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಂತ್ರಿಗಳು ಇಲ್ಲ, ಅಧಿಕಾರಿಗಳು ಇಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಇದೇ ರೀತಿ ತಡವಾಗಿ ಬಜೆಟ್ ಪ್ರತಿಗಳನ್ನು ನೀಡಿದ ಸಂದರ್ಭದಲ್ಲಿ ನಾವೆಲ್ಲರೂ ಪ್ರಸ್ತಾಪ ಮಾಡಿದ್ದೇವೆ. ಆಗ ಏನೋ ಆಗಿದೆ, ಗೊತ್ತಾಗಿಲ್ಲ ಎಂದು ಸರ್ಕಾರ ಹೇಳಿದೆ. ಆದರೆ ಈ ರೀತಿ ಪ್ರತಿ ಬಾರಿ ಮಾಡಿದರೆ ಹೇಗೆ? ಈಗ ನಮಗೆ ಬಜೆಟ್ ಪುಸ್ತಕ ಬೇಡ. ನಮಗೆ ಏಕೆ ಬೇಕು? ಈಗಾಗಲೇ public ಎಲ್ಲರೂ ಓದುತ್ತಿದ್ದಾರೆ, ಈಗ ನಾವು ಏಕೆ ಓದಬೇಕು? ನಮಗೂ ಹೊರಗೆ ಕೊಡಲಿ, ನಾವೆಲ್ಲರೂ ಹೊರಗೆ ಹೋಗುತ್ತೇವೆ. ಇದನ್ನು ನಾವು ಒಪ್ಪುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸರ್ಕಾರದ ಮಾತುಗಳನ್ನೂ ಕೇಳಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸರ್ಕಾರದ ಎಲ್ಲಾ ಮಾತುಗಳನ್ನು ಕೇಳುವುದಕ್ಕೆ ಆಗುತ್ತದೆಯೇ? ಸರ್ಕಾರದವರು ಬೇಕಾದ್ದು ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಒಂದು ನಿಮಿಷ, ನಾನು ಹೇಳುತ್ತೇನೆ, ನಂತರ ನೀವು ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಮಾತನಾಡಿದ ನಂತರ ನಾವು ಮಾತನಾಡುವುದಕ್ಕೆ ಆಗುವುದಿಲ್ಲ. ತಾವು ಕೊನೆಗೆ ಹೇಳಬೇಕು. ನಾನು 2013 ರಿಂದ ಮೂರು ವರ್ಷಗಳ ಕಾಲ ಸಭಾನಾಯಕನಾಗಿ ಕೆಲಸ ಮಾಡಿದ್ದು, ನಾಲ್ಕು ಬಜೆಟ್‌ಗಳನ್ನು ಸದನದಲ್ಲಿ ಮಂಡಿಸಿದ್ದೇನೆ. ಕೆಳಮನೆಯಲ್ಲಿ ಬೆಳಗ್ಗೆ 11 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ presentation ಮಾಡಿ, ಓದಲು ಪ್ರಾರಂಭ ಮಾಡುತ್ತಾರೆ. ನಂತರ ಮೇಲ್ಮನೆಯಲ್ಲಿಯೂ 11 ಗಂಟೆಗೆ ಸರಿಯಾಗಿ ಮಂಡಿಸುತ್ತಾರೆ. ಈಗ ಬಜೆಟ್ ಪುಸ್ತಕಗಳು ಎಲ್ಲಾ ಕಡೆಗಳಲ್ಲಿ ಹಂಚಿಕೆಯಾಗಿದ್ದು, ಬೀದಿ–ಬೀದಿಯಲ್ಲಿ, ಎಲ್ಲಾ ಕಡೆಗಳಲ್ಲಿಯೂ ಬಜೆಟ್ ಪುಸ್ತಕಗಳು ಇವೆ. ಮೇಲ್ಮನೆಯು ತನ್ನದೇ ಆದ ಉನ್ನತ ಪರಂಪರೆ, ಶತಮಾನಗಳ ಇತಿಹಾಸ ಹೊಂದಿರುವ ಪವಿತ್ರವಾದ ಸದನದಲ್ಲಿ ಒಂದು ಗಂಟೆಗೆ Budget presentation ಮಾಡುತ್ತಾರೆ ಎನ್ನುವುದು ಎಷ್ಟರಮಟ್ಟಿಗೆ ಸರಿ? ಕಳೆದ ಬಾರಿ ಮಾನ್ಯ ಸಭಾನಾಯಕರು ಪ್ರತಿ ಪಕ್ಷದ ಸ್ಥಾನದಲ್ಲಿ ಕುಳಿತಿದ್ದು, ಅವರೂ ಬೆಳಗ್ಗೆ 11 ಗಂಟೆಗೆ Budget presentation ಮಾಡಬೇಕಾಗಿತ್ತು ಎಂದು ಹೇಳಿದರು. ಈಗ ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬಂದಿದ್ದಾರೆ. ನಾನು ಸಭಾನಾಯಕನಾಗಿ ಮೂರು ವರ್ಷಗಳಲ್ಲಿ ನಾಲ್ಕು ಬಜೆಟ್‌ಗಳನ್ನು ಸದನದಲ್ಲಿ ಮಂಡಿಸಿದ್ದೇನೆ. ಕೆಳಮನೆಯಲ್ಲಿ ಬೆಳಗ್ಗೆ 11 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಪುಸ್ತಕವನ್ನು ಓದುವುದಕ್ಕೆ ಪ್ರಾರಂಭಿಸಿದ ಕೂಡಲೇ ಬೆಳಗ್ಗೆ 11 ಗಂಟೆಗೆ sharp ಆಗಿ ನಾನು ಮೇಲ್ಮನೆಯಲ್ಲಿ Budget presentation ಮಾಡಿದ್ದೇನೆ.

ನಾನು ದಾರಿಯಲ್ಲಿ ಬರುವಾಗ ಅನೇಕರು ಬಜೆಟ್ ಪುಸ್ತಕಗಳನ್ನು ಕೈಯಲ್ಲಿ ಹಿಡಿದುಕೊಂಡು ಓಡಾಡುತ್ತಿದ್ದರು. ಈ ಸದನದ sanctity ಯನ್ನು ಉಳಿಸಬೇಕಲ್ಲವೇ? ಶತಮಾನಗಳ ಇತಿಹಾಸವನ್ನು ಹೊಂದಿ, ತನ್ನದೇ ಪಾವಿತ್ರ್ಯತೆಯನ್ನು ಹೊಂದಿ, ಇಡೀ ದೇಶದಲ್ಲಿ ಅತ್ಯಂತ ಹಿರಿಯ ಚಿಂತಕರ ಚಾವಡಿ ಎಂದು ಪ್ರಖ್ಯಾತಿ ಪಡೆದ ಮೇಲ್ಮನೆಯಲ್ಲಿ ಮುಂಗಡ ಪತ್ರವನ್ನು ತಡವಾಗಿ ಮಂಡಿಸುವುದು ಸರಿಯೇ? ನಾನು ಸದನಕ್ಕೆ ಬರುವ ಮುನ್ನ ಬಜೆಟ್ ಪುಸ್ತಕವನ್ನು ಜೊತೆಯಲ್ಲಿಯೇ ತೆಗೆದುಕೊಂಡು ಬಂದಿದ್ದೇನೆ. ಎಲ್ಲರೂ ನೋಡಿ, ಈಗ ನನ್ನ ಕೈಯಲ್ಲಿ ಬಜೆಟ್ ಪುಸ್ತಕವಿದೆ. ಏಕೆ ಈ ರೀತಿ ಮಾಡುತ್ತಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಗೌರವಾನ್ವಿತ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದು, ಅವರು ಕೆಳಮನೆಯಲ್ಲಿ ಬಜೆಟ್ ಪುಸ್ತಕವನ್ನು ಓದಲು ಪ್ರಾರಂಭ ಮಾಡುತ್ತಾರೆ. ಮಾನ್ಯ ಸಭಾನಾಯಕರು ಮೇಲ್ಮನೆಯಲ್ಲಿ ಬಜೆಟ್ ಅನ್ನು presentation ಮಾಡಲಿ ಎನ್ನುವ ಉದ್ದೇಶದಿಂದ ಮೇಲ್ಮನೆಯ ಸಭಾನಾಯಕರಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಜೆಟ್ ಪುಸ್ತಕ ಇರುವ bag ಅನ್ನು ಕೊಟ್ಟು ಕಳುಹಿಸುತ್ತಾರೆ. ಹೀಗಿರುವಾಗ ಈ ಮೇಲ್ಮನೆಯನ್ನು ಇವರು ಇಷ್ಟು ಹಗುರವಾಗಿ ಕಾಣುವುದು ಸರಿಯಲ್ಲ, ನಾನು ಇನ್ನೂ ಹೆಚ್ಚಿಗೆ ಮಾತನಾಡುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ನನ್ನ ಪಕ್ಕದಲ್ಲಿ ಆರು ವರ್ಷಗಳ ಕಾಲ ಕುಳಿತಿದ್ದರು. ಅವರು ಕೆಳಮನೆ–ಮೇಲ್ಮನೆ ಎಂದು discrimination ಮಾಡುವುದು ಎಷ್ಟರಮಟ್ಟಿಗೆ ಸರಿ ಎನ್ನುವುದನ್ನು ಹೇಳಬೇಕು. ಅಲ್ಲಿ ಬೆಳಗ್ಗೆ 11 ಗಂಟೆಗೆ ಬಜೆಟ್ ಭಾಷಣ ಪ್ರಾರಂಭವಾದರೆ, ಇಲ್ಲಿಯೂ ಬೆಳಗ್ಗೆ 11 ಗಂಟೆಗೆ ಬಜೆಟ್ ಮಂಡನೆಯಾಗಬೇಕು. ಕಳೆದ ಸಾರಿ ಇದೇ ವಿಷಯವಾಗಿ ಈಗಿನ ಮಾನ್ಯ ಸಭಾನಾಯಕರು ತಕರಾರು ಮಾಡಿದಾಗ ನಾವು ಸಹ ಅದಕ್ಕೆ ಧ್ವನಿಗೂಡಿಸಿ ಅವರ ಪರವಾಗಿ ಮಾತನಾಡಿದ್ದೆವು. ಈಗ ಅಲ್ಲಿ ಕುಳಿತ ಕೂಡಲೇ ಪದ್ಧತಿ ಬದಲಾಗುವುದೇ? ಅವರು ಈ ಮನೆಯನ್ನು ಕಡೆಗಣಿಸುವುದು ವಿಪರೀತವಾಗಿ ನಡೆಯುತ್ತಿದೆ. ಇದು ನಮಗೆ ಸರಿ ಎನಿಸುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ನನ್ನ ಬಾಜೂ ಆರು ವರ್ಷ ಕುಳಿತಿದ್ದರು. ಆಗ ಈ ಮನೆ ಬೇಕು, ಈಗ ಬೇಡ ಎಂದರೆ ಹೇಗೆ? ಮಾನ್ಯ ಉಪ ಮುಖ್ಯಮಂತ್ರಿಯವರಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಸದನಕ್ಕೆ ಬಂದಿದ್ದಾರೆ, ಅವರು ಮೇಲ್ಮನೆ ಸದಸ್ಯರಾಗಿದ್ದಾರೆ. ಈ ಮನೆಯ ಸದಸ್ಯರ ಬಗ್ಗೆ ಅವರಿಗೆ ಕಾಳಜಿ ಇಲ್ಲವೇ? ಹಾಗೆ ಕೈಕಟ್ಟಿಕೊಂಡು ಮೇಲ್ಮನೆಯ ಸದಸ್ಯರಾಗುವುದಕ್ಕೆ ಮಾತ್ರ ಸರಿಯೇ? ಈ ರೀತಿ ಆಗಬಾರದು. ಮಾನ್ಯ ಸಭಾಪತಿಯವರೆ, ತಾವೇ ಹೇಳಬೇಕು. ಎಲ್ಲಾ ಕಡೆಯೂ ಬಜೆಟ್ ಪುಸ್ತಕಗಳು ಲಭ್ಯವಿದ್ದು, ಈಗ ನಾವು ಅದನ್ನು ಸದನದಲ್ಲಿ ತೆಗೆದುಕೊಂಡು ಓದುವುದರಲ್ಲಿ ಅರ್ಥವಿದೆಯೇ? ಮಾನ್ಯ ಮುಖ್ಯಮಂತ್ರಿಯವರು ದಯಮಾಡಿ ತಿಳಿಸಬೇಕು.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಳೆದ ಬಾರಿಯೂ ಇದೇ ರೀತಿ ಆಗಿದ್ದು, ಆಗ ನಾವೆಲ್ಲರೂ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಿ, ಸಂಪ್ರದಾಯವನ್ನು ಮುರಿಯಬಾರದು. ಕೆಳಮನೆಯಲ್ಲಿ ಬೆಳಗ್ಗೆ 11 ಗಂಟೆಗೆ ಮಂಡಿಸಿದ ತಕ್ಷಣ ಎಲ್ಲರಿಗೂ ಬಜೆಟ್ ಪುಸ್ತಕ ಸಿಗುತ್ತದೆ. ನಂತರ ಇಲ್ಲಿ Budget presentation ಮಾಡುವುದು ಸರಿಯಲ್ಲ, ಇಲ್ಲಿಯೂ ಬೆಳಗ್ಗೆ 11 ಗಂಟೆಗೆ ಕೊಡಬೇಕು ಎಂದು ಚರ್ಚೆ ಆಯಿತು. ದಯಮಾಡಿ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುವುದೇನೆಂದರೆ, ಸತ್ಸಂಪ್ರದಾಯವನ್ನು ಮುರಿಯುವುದು ಬೇಡ. ಕೆಳಮನೆಯಲ್ಲಿ ಬೆಳಗ್ಗೆ 11 ಗಂಟೆಗೆ Budget presentation ಮಾಡಿದ ರೀತಿ ಈ ಮನೆಯಲ್ಲಿಯೂ Budget presentation ಮಾಡಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

(ಮುಂದು)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(171)/05.03.2020/1.10/ಹೆಚ್‌ವಿ–ಬಿಎನ್‌ಎಸ್

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಮಾತನಾಡುತ್ತಾ, ‘ಎರಡೂ ಮನೆಗಳಲ್ಲಿ ಒಂದೇ ಸಮಯಕ್ಕೆ ಆಯವ್ಯಯ ಮಂಡನೆ ಮಾಡಬೇಕು. ಇಲ್ಲದಿದ್ದರೆ ಹೊರಗಿನವರಿಗೆ ಮಾಹಿತಿ ದೊರೆತ ಮೇಲೆ ಶಾಸಕರ ಕೈಗೆ ಆಯವ್ಯಯದ ಪುಸ್ತಕ ದೊರೆಯುತ್ತದೆ’ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ಮುಂದೆ ಈ ರೀತಿ ಆಗದಿರುವಂತೆ ನೋಡಿಕೊಂಡು, ಎರಡು ಮನೆಗಳಲ್ಲಿ ಒಂದೇ ಸಮಯಕ್ಕೆ ಆಯವ್ಯಯ ಮಂಡನೆ ಮಾಡುತ್ತೇವೆ.

**2. <u>ವಿತ್ತೀಯ ಕಾರ್ಯಕಲಾಪ</u>**

**<u>2020–2021ನೇ ಸಾಲಿನ ಆಯವ್ಯಯ ಅಂದಾಜುಗಳ ಮಂಡನೆ</u>**

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಸನ್ಮಾನ್ಯ ಸಭಾಪತಿಯವರೇ, 2020–2021ನೇ ಸಾಲಿನ ಆಯವ್ಯಯವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**(ಆಯವ್ಯಯದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ‘ಎರಡೂ ಸದನಗಳಲ್ಲಿ ಒಂದೇ ಸಮಯಕ್ಕೆ ಆಯವ್ಯಯ ಮಂಡನೆಯಾಗುವ ವ್ಯವಸ್ಥೆ ಮಾಡಲಾಗುತ್ತದೆ’ ಎನ್ನುವ ಮಾನ್ಯ ಮುಖ್ಯಮಂತ್ರಿಗಳ ಮಾತುಗಳನ್ನು ನಾನು ಸ್ವಾಗತಿಸುತ್ತಿದ್ದೇನೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಸಲಹೆಯನ್ನು ನೀಡಲು ಬಯಸುತ್ತಿದ್ದೇನೆ. ಕೆಳಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಪುಸ್ತಕವನ್ನು ಓದಿದ್ದಾರೆ, ಈ ಮನೆಯಲ್ಲಿ 5–10 ನಿಮಿಷಗಳಲ್ಲಿ ಆಯವ್ಯಯದಲ್ಲಿನ ಮುಖ್ಯಾಂಶಗಳನ್ನು ತಿಳಿಸಿದರೆ ಉತ್ತಮ ಎನ್ನುವುದು ನನ್ನ ಸಲಹೆಯಾಗಿದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಆ ರೀತಿಯ ಸಂಪ್ರದಾಯ ಈ ಮನೆಯಲ್ಲಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯದಿಂದ ನಮಗೂ ಸಂತೋಷವಾಗಿದೆ.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಾಗಿ ನಾವೇ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

**ಸಭಾಪತಿಯವರು:–** ಈಗ ಸಭೆಯು ಮುಕ್ತಾಯವಾಗಿ ಪುನಃ ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷಗಳಿಗೆ ಸೇರುವುದು.

**(ಸದನವು ಮಧ್ಯಾಹ್ನ 1 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 06ನೇ ಮಾರ್ಚ್ ಮಾಹೆ 2020ರ ಶುಕ್ರವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)**

~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~